**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಮಾತಂವಿ/ವಿಜಯೀಭವ/ 05 /2020-21 ಆಯುಕ್ತರ ಕಛೇರಿ, ಬೆಂಗಳೂರು

ದಿನಾಂಕ : 02.06.2020

# ಅಧಿಕೃತ ಜ್ಞಾಪನ

**ವಿಷಯ:** UPSC, KPSC, SSC ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ತರಬೇತಿ ನೀಡಲು ಆಸಕ್ತಿಯಿರುವ ಅಧ್ಯಾಪಕರುಗಳು/ಬೋಧಕೇತರರು ಗೂಗಲ್ ಫಾರ್ಮ್‌ನಲ್ಲಿ ಮಾಹಿತಿ ಅಪ್ಲೋಡ್ ಮಾಡುವ ಬಗ್ಗೆ.

********

ಕಾಲೇಜು ಶಿಕ್ಷಣ ಇಲಾಖೆಯು "ವಿಜಯೀಭವ" ಯೂಟ್ಯೂಬ್ ಚಾನಲ್/ಬ್ಲಾಗ್/ವೆಬ್ ಪೋರ್ಟಲ್/ಆಪ್ ಮೂಲಕ ಇಲಾಖಾ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ, ಗುಣಮಟ್ಟದ ತರಬೇತಿ ನೀಡಲು ಯೋಜಿಸಲಾಗಿದೆ. ಇದಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಿದ/ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಅಥವಾ ತರಬೇತಿ ನೀಡಲು ಆಸಕ್ತರಾಗಿರುವ ಅಧ್ಯಾಪಕರುಗಳು/ಬೋಧಕೇತರರು ಗೂಗಲ್ ಫಾರ್ಮ್‌ನಲ್ಲಿ ತಮ್ಮ ಮಾಹಿತಿ ಅಪ್ಲೋಡ್ ಮಾಡಲು ಸೂಚಿಸಲಾಗಿದೆ.

**ಆರಂಭಿಕವಾಗಿ ಈ ಕೆಳಗೆ ನಮೂದಿಸಿದ ವಿಷಯಗಳಿಗೆ ಮೊದಲ ಆದ್ಯತೆ ನೀಡಲಾಗಿದೆ.**

1) ಭಾರತದ ಇತಿಹಾಸ
2) ಭಾರತದ ಸಂವಿಧಾನ ಮತ್ತು ರಾಜಕೀಯ
3) ಭೂಗೋಳ ಶಾಸ್ತ್ರ (ಜಾಗತಿಕ, ಭಾರತ, ಕರ್ನಾಟಕ)
4) ಭಾರತದ ಆರ್ಥಿಕತೆ & ಅಭಿವೃದ್ಧಿ
5) ಭಾರತದ ಕಲೆ ಮತ್ತು ಸಂಸ್ಕೃತಿ
6) ಸಾಮಾನ್ಯ ವಿಜ್ಞಾನ (ಭೌತಶಾಸ್ತ್ರ)
7) ಸಾಮಾನ್ಯ ವಿಜ್ಞಾನ (ರಸಾಯನ ಶಾಸ್ತ್ರ)
8) ಸಾಮಾನ್ಯ ವಿಜ್ಞಾನ (ಜೀವಶಾಸ್ತ್ರ)
9) ವಿಜ್ಞಾನ & ತಂತ್ರಜ್ಞಾನ
10) ಪರಿಸರ & ಪರಿಸರ ಅಧ್ಯಯನ
11) ನೈತಿಕತೆ & ಸಮಗ್ರತೆ
12) Quantitative Aptitude
13) Test of Reasoning
14) ಪ್ರಚಲಿತ ಘಟನೆಗಳು

Scanned with CamScanner

15) General English

16) ಸಾಮಾನ್ಯ ಕನ್ನಡ

17) Spoken English

18) Basics of Computers

19) Exam Guidance

20) Motivation Sessions

**ಎಜುಕೇಟರ್ ಆಗುವವರಿಗೆ ಹೆಚ್ಚುವರಿ ಮಾಹಿತಿ:**

1) ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ನೀಡಲು ಆಯ್ದುಕೊಳ್ಳುವ ವಿಷಯವು, ನೀವು ಇಲಾಖೆಗೆ ನೇಮಕವಾಗಿರುವ ವಿಷಯವೇ ಆಗಿರಬೇಕೆಂಬ ನಿರ್ಬಂಧವಿಲ್ಲ.
2) ಒಬ್ಬರು ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯ ಆಯ್ಕೆ ಮಾಡಿಕೊಳ್ಳಬಹುದು. ಗೂಗಲ್ ಫಾರ್ಮ್‌ನಲ್ಲಿ ಕೇಳಿರುವ Priority ಆಯ್ಕೆಯಲ್ಲಿ ಸ್ಪಷ್ಟವಾಗಿ ನಮೂದಿಸುವುದು.
3) ನೀವು ತರಬೇತಿ ನೀಡುವ ವಿಷಯ ಸಿದ್ಧಪಡಿಸುವಾಗ, ವಿವರಿಸಲು ಅಗತ್ಯವಿರುವಷ್ಟು ಮಾಹಿತಿಯನ್ನು PPT ಯಲ್ಲಿಯೂ ಮತ್ತು ನೋಟ್ಸ್ ನೀಡುವಷ್ಟು ವಿಸ್ತೃತವಾಗಿ ಮಾಹಿತಿಯನ್ನು Word ಫೈಲ್‌ನಲ್ಲಿಯೂ ತಯಾರಿಸಲು ಸಿದ್ಧರಾಗಿರಬೇಕು.
4) ಗುಣಮಟ್ಟದ ವಿಡಿಯೋ ತಯಾರಿಕೆ ಕಾರಣದಿಂದ ಬೆಂಗಳೂರಿನ ಕೇಂದ್ರ ಕಛೇರಿಗೆ ಬಂದು ವಿಡಿಯೋ ತಯಾರಿಸಲು ಸಿದ್ಧರಾಗಿರಬೇಕು.

ಈ ಮೇಲೆ ತಿಳಿಸಿದ ಮಾಹಿತಿ ಆಧರಿಸಿ, ಆಸಕ್ತಿಯಿರುವ ಅಧ್ಯಾಪಕರುಗಳು/ಬೋಧಕೇತರರು ಗೂಗಲ್ ಫಾರ್ಮ್‌ನಲ್ಲಿ ಮಾಹಿತಿಯನ್ನು ಅಪ್ಲೋಡ್ ಮಾಡಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಎಲ್ಲಾ ಸಿಬ್ಬಂದಿಯವರಿಗೆ ಸದರಿ ಮಾಹಿತಿ ತಲುಪಿಸುವುದು ಮತ್ತು ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಕಲಬುರಗಿ – ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

Scanned with CamScanner